ಬಾಗೇಪಲ್ಲಿ ತಾಲ್ಲೂಕಿನಲ್ಲಿ ಜಲಸಂಪನ್ಮೂಲ ಅಭಿವೃದ್ಧಿ ಕಾಮಗಾರಿ

2431 (2974) ಶ್ರೀ ಎಸ್. ಸಂಪಂಗಿ (ಬಾಗೇಪಲ್ಲಿ) :— ಮಾನ್ಯ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಾದ್ಯಂತ 1999-2000, 2000-01ನೇ ಸಾಲಿನಲ್ಲಿ ಹಮ್ಮಿಕೊಂಡು ಪೂರ್ಣಗೊಳಿಸಿರುವ ಜಲ ಸಂಪನ್ಮೂಲ ಅಭಿವೃದ್ಧಿ ಕಾಮಗಾರಿಯ ವಿವರ ನೀಡುವುದು?

ಆ) ಪ್ರಸ್ತುತ ಸಾಲಿನಲ್ಲಿ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ವ್ಯಯಮಾಡಿರುವ ಹಣವೆಷ್ಟು ; (ತಾಲ್ಲೂಕುವಾರು ವರ್ಷವಾರು ವಿವರ ನೀಡುವುದು)

ಶ್ರೀ ಎಸ್. ಕುಮಾರ್ ಬಂಗಾರಪ್ಪ (ನೀರಾವರಿ ರಾಜ್ಯ ಸಚಿವರು) :—

ಅ) ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಾದ್ಯಂತ 1999-2000, 2000-01ನೇ ಸಾಲಿನಲ್ಲಿ ಹಮ್ಮಿಕೊಂಡಿರುವ ಜಲ ಸಂಪನ್ಮೂಲ ಅಭಿವೃದ್ಧಿ ಕಾಮಗಾರಿಯ ವಿವರ ಕೆಳಗಿನಂತಿವೆ.

ಕ್ರ. ಸಂ.	ಲೆಕ್ಕ ಶೀರ್ಷಿಕೆ	ಕಾಮಗಾರಿಗಳ ಸಂಖ್ಯೆ	ಖರ್ಚು ಮಾಡಿದ ಹಣ ಲಕ್ಷ ರೂ.ಗಳಲ್ಲಿ	ಕಾಮಗಾರಿಗಳ ಸಂಖ್ಯೆ	ಖರ್ಚು ಮಾಡಿದ ಹಣ ಲಕ್ಷ ರೂ.ಗಳು
1)	4702 ಸಣ್ಣ ನೀರಾವರಿ ಕೆರೆ ಕಲ್ಯಾಣ	3	8.47	3	2.92
2)	4704 ಸಣ್ಣ ನೀರಾವರಿ ಕೆರೆಗಳ ಆಧುನೀಕರಣ	1	-	2	7.96
	ಒಟ್ಟು	4	8.47	5	10.88

99-2000ನೇ ಸಾಲಿನ ಕಾಮಗಾರಿಗಳ ಪೈಕಿ 2 ಕಾಮಗಾರಿಗಳನ್ನು ಅದೇ ಸಾಲಿನಲ್ಲಿ ಪೂರ್ಣಗೊಳಿಸಲಾಗಿದ್ದು ಉಳಿದ ಎರಡು ಕಾಮಗಾರಿಗಳು 2000-01ನೇ ಸಾಲಿಗೆ ಮುಂದುವರಿದಿದೆ. 2000-01ನೇ ಸಾಲಿನ 5 ಕಾಮಗಾರಿಗಳ ಪೈಕಿ 2 ಕಾಮಗಾರಿಗಳನ್ನು ಅದೇ ಸಾಲಿನಲ್ಲಿ ಪೂರ್ಣಗೊಳಿಸಿದ್ದು ಉಳಿಕೆ 3 ಕಾಮಗಾರಿಗಳು 20001-02ನೇ ಸಾಲಿಗೆ ಮುಂದುವರಿದಿದೆ.

ಆ) 2001-02ನೇ ಸಾಲಿನ ಜೂನ್ 2001ರ ಅಂತ್ಯದವರೆಗೆ 107.80 ಲಕ್ಷಗಳ ವೆಚ್ಚವನ್ನು ಮಾಡಲಾಗಿದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2874 ಕ್ಕೆ ಅನುಬಂಧ

ಕ್ರಮ ಸಂಖ್ಯೆ	ತಾಲ್ಲೂಕು	2001-02ನೇ ಸಾಲಿನಲ್ಲಿ ಇದರಾ 6:2001 ರವರೆಗೆ ವೆಚ್ಚ
1)	ಕೋಲಾರ	21.59
2)	ಮಾಲೂರು	9.67
3)	ಬಂಗಾರಪೇಟೆ	1.53
4)	ಶ್ರೀನಿವಾಸಪುರ	21.70
5)	ಮುಳಬಾಗಿಲು	6.20
6)	ಚಿಂತಾಮಣಿ	7.77
7)	ಚಿಕ್ಕಬಳ್ಳಾಪುರ	11.78
8)	ಗೌರಿಬಿದನೂರು	10.42
9)	ಗುಂಡಿಬಂಡೆ	1.52
10)	ಬಾಗೇಪಲ್ಲಿ	2.04
11)	ಶಿಡ್ಲಘಟ್ಟ	13.58
	ಒಟ್ಟು	107.80

ಕೇಂದ್ರ ಸರ್ಕಾರದ ಅಂತ್ಯೋದಯ ಯೋಜನೆ

2433 (3243) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೇಂದ್ರ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಗೆ ಸಂಬಂಧಿಸಿದಂತೆ ಮೈಸೂರು ನಗರದಲ್ಲಿ ಫಲಾನುಭವಿಗಳನ್ನು ಗುರುತಿಸಲಾಗಿದೆಯೇ?

ಆ) ಹಾಗಿದ್ದಲ್ಲಿ, ಇದರ ಲಾಭವನ್ನು ಎಷ್ಟು ಮಂದಿ ಪಡೆದುಕೊಳ್ಳುವರು; ಎಂದಿನಿಂದ ಪಡೆದುಕೊಳ್ಳುವರು;

ಇ) ಇಲ್ಲದಿದ್ದಲ್ಲಿ ಫಲಾನುಭವಿಗಳನ್ನು ಗುರುತಿಸಲು ಎಷ್ಟು ಕಾಲ ಬೇಕಾಗುವುದು?